2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ ಚನ್ನಗಿರಿ .

ಸಿಸಿ ನಂ. **12/2023**

ಹೆಸರುಃ ಡಾಃ ಬಸವರಾಜ ಚಾಸಾಃ 3

ತಂದೆಃ ಚನ್ನಬಸಪ್ಪ ಫ್ರಾಸಾಃ 3

ವಯಸ್ಸುಃ 50

ಉದ್ಯೋಗಃ ವೈದ್ಯರು

ವಾಸ ಸ್ಥಳಃ ದುಬ್ಬೈ.

ಸಾಕ್ಷಿಗೆ ದಿನಾಂಕಃ 17.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ 1 ನನ್ನ ತಾಯಿ, ಚಾಸಾ 2 ನನ್ನ ಹೆಂಡತಿ. ಆರೋಪಿ ನನ್ನ ಅಣ್ಣ. ದಿಃ 11.07.2022 ರಂದು ರಾತ್ರಿ 8.30 ಸಮಯದಲ್ಲಿ ಆರೋಪಿಯು ಏಕಾಏಕಿ ಬಂದು ಚಾಸಾ 1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ನಾನು ಹಾಗೂ ಚಾಸಾ 2 ರವರು ಅಡುಗೆ ಮನೆಯಲ್ಲಿದ್ದೆವು. ಗಲಾಟೆ ಶಬ್ದವನ್ನು ಕೇಳಿ ನನ್ನ ಹೆಂಡತಿ ಚಾಸಾ 2 ರವರು ಬಿಡಿಸಲು ಹೋದಾಗ ಆರೋಪಿಯು ಚಾಸಾ 2 ರವರಿಗೂ ಹೊಡೆದು ಹಲ್ಲೆ ಮಾಡಿರುತ್ತಾರೆ. ನಂತರ ಆರೋಪಿಯು ಬೈದಾಡಿಕೊಂಡು ತನ್ನ ಮನೆಗೆ ಹೋಗಿರುತ್ತಾನೆ. ಆರೋಪಿಯು ನನಗೂ ಹಾಗೂ ಚಾಸಾ 2 ರವರು ಮನೆಯಲ್ಲಿರಬಾರದು ಇದ್ದರೇ ಕೈಕಾಲು ಕಡಿಯುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಮರುದಿನ ಬೆಳಗ್ಗೆ ಆಸ್ಪತ್ರೆಗೆ ಹೋಗಿ ಚಾಸಾ 2 ರವರು ಚಿಕಿತ್ಸೆಯನ್ನು ಪಡೆದಿರುತ್ತಾರೆ. ಸರ್ವೆ ನಂ. 279, 284 ಹಾಗೂ 283 ರ ಖಾತೆಗಳು ನನ್ನ ಹಾಗೂ ಆರೋಪಿಯ ಜಂಟಿ ಹೆಸರಿನಲ್ಲಿ ಇರುತ್ತವೆ. ಹಾಗಾಗಿ ನನಗೂ ಹಾಗೂ ಆರೋಪಿಗೂ ಗಲಾಟೆ ಆಗಿರುತ್ತದೆ. ಸದರಿ ವಿಚಾರವಾಗಿ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ 1 ರವರು ಹೃದಯಘಾತದಿಂದ ಮಾರ್ಚ್ 19 ರಂದು ಮರಣ ಹೊಂದಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.**)

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 30.06.2022 ರಂದು ರಜೆಯ ಮೇಲೆ ನನ್ನ ಕುಟುಂಬದೊಂದಿಗೆ ತಾಯಿಯ ಯೋಗಕ್ಷೇಮ ವಿಚಾರಿಸಿಕೊಂಡು ಬಂದು ಸಂತೆಬೆನ್ನೂರಿಗೆ ಬಂದು ನನ್ನ ಅಕ್ಕ ಸುಧಾ ರವರ ಹೆಸರಿನಲ್ಲಿರುವ ಮಹಡಿ ಮನೆಯಲ್ಲಿ ತಂಗಿದ್ದೆವು ಎಂದರೆ ಸರಿ. ದಿಃ 11.07.2022 ರಂದು ರಾತ್ರಿ 8.30 ರಸಮಯದಲ್ಲಪಿ ನಾನು ಹಾಗೂ ಚಾಸಾ 2 ಅಡುಗೆ ಮನೆಯಲ್ಲಿದ್ದಾಗ ಚಾಸಾ1 ರಾವರಿಗೆ ಹಾಲ್ ನಲ್ಲಿ ಆರೋಪಿಯುಏಕಾಏಕಿ ಏರು ಧ್ವನಿಯಲ್ಲಿ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ ಧ್ವನಿ ಕೇಳಿ ಕೂಡಲೇ ನಾನು ಹಾಗೂ ಚಾಸಾ 2 ರವರು ಅಡುಗೆ ಮನೆಯಿಂದ ಹಾಲ್ ಬಂದು ನೋಡಿದಾಗ ಆರೊಪಿಯು ಜಮೀನು ಹಾಗು ಮನೆಯ ವಿಚಾರವಾಗಿ ಚಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಕೂದಲನ್ನು ಹಿಡಿದು ಎಳೆದಾಡಿ ಕೈ ಮುಷ್ಠಿಯಿಂದ ಕುತ್ತಿಗೆಗೆ ಬಲವಾಗಿ ಹೊಡೆದು ಕೆಳಗ ಬಿಳಿಸಿ

ಕೈಕಾಲುಗಳಿಂದ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ, ಅಷರಲ್ಲಿ ನಾನು ಮತ್ತು ನಮ್ಮ ಗ್ರಾಮದ ಚಾಸಾ 4 ಮತ್ತು 5 ರವರು ಜಗಳವನ್ನು ಬಿಡಿಸಲು ಸುಮ್ಮನಾಗದ ಆರೋಪಿಯು ಜೀವ ಸಹಿತ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.ದಿಃ 12.07.2022 ರಂದು ಚಾಸಾ 2 ರವರನು ಸಂತೆಬೆನ್ನೂರು ಆಸ್ಪತ್ರೆಗೆ ಚಿಕಿತ್ಸೆ ಕರೆದುಕೊಂಡು ಹೋಗಿ ಕೊಡಿಸಿರುತ್ತೇನೆ ಎಂದರೆ ಸರಿ. ಆನಂತರ ಚಾಸಾ 1 ರವರು ಆರೋಪಿಯ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು – ಆರೋಪಿತರ ಪರ ವಕೀಲರಿಂದ –**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ರೂ. 500/– ಖರ್ಚಿನೊಂದಿಗೆ ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**Sd/–**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**